# ಸಂಸತ್ತಿನಲ್ಲಿ ಮನ್ನಣೆ ಪಡೆದ ಪಕ್ಷಗಳ ಮತ್ತು ಗುಂಪುಗಳ ನಾಯಕರ ಮತ್ತು ಮುಖ್ಯ ಸಚೇತಕರ (ಸೌಲಭ್ಯಗಳು) ಅಧಿನಿಯಮ, 1998

(30.03.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 40ನೇ ಸಂಪುಟದ 1ನೇ ಸಂಚಿಕೆಯಲ್ಲಿ 173 ರಿಂದ 174ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ

2. ಪರಿಭಾಷೆಗಳು

3. ಮನ್ನಣೆ ಪಡೆದ ಗುಂಪುಗಳ ಮತ್ತು ಪಕ್ಷಗಳ ನಾಯಕರಿಗೆ ಮತ್ತು ಮುಖ್ಯ ಸಚೇತಕರಿಗೆ ಸೌಲಭ್ಯಗಳು

4. ನಿಯಮಗಳನ್ನು ರಚಿಸಲು ಅಧಿಕಾರ

5. 1959ರ 10ನೇ ಅಧಿನಿಯಮದ 3ನೇ ಪ್ರಕರಣದ ತಿದ್ದುಪಡಿ

**ಸಂಸತ್ತಿನಲ್ಲಿ ಮನ್ನಣೆ ಪಡೆದ ಪಕ್ಷಗಳ ಮತ್ತು ಗುಂಪುಗಳ ನಾಯಕರ ಮತ್ತು ಮುಖ್ಯ ಸಚೇತಕರ (ಸೌಲಭ್ಯಗಳು) ಅಧಿನಿಯಮ, 1998**

**(1999ರ ಅಧಿನಿಯಮ ಸಂಖ್ಯೆ 5)**

**[7ನೇ ಜನವರಿ, 1999]**

ಸಂಸತ್ತಿನಲ್ಲಿ ಮನ್ನಣೆ ಪಡೆದ ಪಕ್ಷಗಳ ಮತ್ತು ಗುಂಪುಗಳ ನಾಯಕರಿಗೆ ಮತ್ತು ಮುಖ್ಯಸಚೇತಕರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸಂಸತ್ತಿನಲ್ಲಿ ಮನ್ನಣೆ ಪಡೆದ ಪಕ್ಷಗಳ ಮತ್ತು ಗುಂಪುಗಳ ನಾಯಕರ ಮತ್ತು ಮುಖ್ಯ ಸಚೇತಕರ (ಸೌಲಭ್ಯಗಳು) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು 1999ರ ಫೆಬ್ರವರಿ 5ನೇ ದಿನದಂದು ಜಾರಿಗೆ ಬಂದಿದೆ ಎಂಬುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮನ್ನಣೆ ಪಡೆದ ಗುಂಪು" ಎಂದರೆ, -

(i) ರಾಜ್ಯಸಭೆಯ ಸಂಬಂಧದಲ್ಲಿ, ಸದನದಲ್ಲಿ ಕನಿಷ್ಠ ಹದಿನೈದು ಸದಸ್ಯರಿಗೆ ಕಡಿಮೆ ಇಲ್ಲದ ಮತ್ತು ಇಪ್ಪತ್ನಾಲ್ಕು ಸದಸ್ಯರಿಗಿಂತ ಹೆಚ್ಚಿಲ್ಲದ ಸಂಖ್ಯಾಬಲವನ್ನು ಹೊಂದಿರುವ ಪ್ರತಿಯೊಂದು ಪಕ್ಷ;

(ii) ಲೋಕಸಭೆಯ ಸಂಬಂಧದಲ್ಲಿ, ಸದನದಲ್ಲಿ ಮೂವತ್ತು ಸದಸ್ಯರಿಗಿಂತ ಕಡಿಮೆ ಇಲ್ಲದ ಮತ್ತು ಐವತ್ನಾಲ್ಕು ಸದಸ್ಯರಿಗಿಂತ ಹೆಚ್ಚಿಲ್ಲದ ಸಂಖ್ಯಾಬಲವನ್ನು ಹೊಂದಿರುವ ಪ್ರತಿಯೊಂದು ಪಕ್ಷ;

(ಬಿ) "ಮನ್ನಣೆ ಪಡೆದ ಪಕ್ಷ" ಎಂದರೆ,-

(i) ರಾಜ್ಯ ಸಭೆಯ ಸಂಬಂಧದಲ್ಲಿ, ಸದನದಲ್ಲಿ ಇಪ್ಪತ್ತೈದು ಸದಸ್ಯರಿಗಿಂತ ಕಡಿಮೆ ಇಲ್ಲದ ಸಂಖ್ಯಾಬಲ ಹೊಂದಿರುವ ಪ್ರತಿಯೊಂದು ಪಕ್ಷ;

(ii) ಲೋಕಸಭೆಯ ಸಂಬಂಧದಲ್ಲಿ, ಸದನದಲ್ಲಿ ಐವತ್ತೈದು ಸದಸ್ಯರಿಗಿಂತ ಕಡಿಮೆ ಇಲ್ಲದ ಸಂಖ್ಯಾಬಲ ಹೊಂದಿರುವ ಪ್ರತಿಯೊಂದು ಪಕ್ಷ.

**3. ಮನ್ನಣೆ ಪಡೆದ ಗುಂಪುಗಳ ಮತ್ತು ಪಕ್ಷಗಳ ನಾಯಕರಿಗೆ ಮತ್ತು ಮುಖ್ಯ ಸಚೇತಕರಿಗೆ ಸೌಲಭ್ಯಗಳು.–** ಕೇಂದ್ರ ಸರ್ಕಾರವು ಈ ಸಂಬಂಧವಾಗಿ ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು, ಮನ್ನಣೆ ಪಡೆದ ಗುಂಪು ಮತ್ತು ಮನ್ನಣೆ ಪಡೆದ ಪಕ್ಷದ ಪ್ರತಿಯೊಬ್ಬ ನಾಯಕ, ಉಪನಾಯಕ ಮತ್ತು ಪ್ರತಿಯೊಬ್ಬ ಮುಖ್ಯ ಸಚೇತಕನು ದೂರವಾಣಿ ಮತ್ತು ಸಚಿವಾಲಯ ಸಿಬ್ಬಂದಿ ಸೌಲಭ್ಯಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂಥ ಸೌಲಭ್ಯಗಳನ್ನು,–

(i) ಮಂತ್ರಿಗಳ ಸಂಬಳಗಳು ಮತ್ತು ಭತ್ಯಗಳ ಅಧಿನಿಯಮ, 1952 (1952ರ 58)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಮಂತ್ರಿಯ ಪದವನ್ನು ಹೊಂದಿರುವ;

(ii) ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕನ ಸಂಬಳ ಮತ್ತು ಭತ್ಯಗಳ ಅಧಿನಿಯಮ, 1977 (1977ರ 33)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ವಿರೋಧಪಕ್ಷದ ನಾಯಕನ ಪದವನ್ನು ಹೊಂದಿರುವ; ಅಥವಾ

(iii) ಸರ್ಕಾರವು ರಚಿಸಿದ ಸಂಸದೀಯ ಸಮಿತಿಯಲ್ಲಿ ಅಥವಾ ಇತರೆ ಸಮಿತಿಯಲ್ಲಿ, ಕೌನ್ಸಿಲ್‌ನಲ್ಲಿ, ಮಂಡಳಿಯಲ್ಲಿ, ಆಯೋಗದಲ್ಲಿ ಅಥವಾ ಇತರ ನಿಕಾಯದಲ್ಲಿ ಯಾವುದೇ ಪದವನ್ನು ಅಥವಾ ಪ್ರಾತಿನಿಧ್ಯವನ್ನು ಹೊಂದಿರುವ ಕಾರಣದಿಂದಾಗಿ ಅಂಥದೇ ದೂರವಾಣಿ ಮತ್ತು ಸಚಿವಾಲಯ ಸಿಬ್ಬಂದಿ ಸೌಲಭ್ಯಗಳನ್ನು ಹೊಂದುವುದಕ್ಕೆ ಹಕ್ಕುಳ್ಳವನಾಗಿರುವ; ಅಥವಾ

(iv) ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಸರ್ಕಾರದ ಅಥವಾ ಯಾವುದೇ ಇತರೆ ಸ್ಥಳೀಯ ಪ್ರಾಧಿಕಾರದ ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ನಿಗಮವು ಯಾವುದೇ ಇತರ ಸ್ಥಾನಬಲದಿಂದ ಅವನಿಗೆ ಒದಗಿಸಿದ ಅಂಥದೇ ದೂರವಾಣಿ ಮತ್ತು ಸಚಿವಾಲಯ ಸಿಬ್ಬಂದಿ ಸೌಲಭ್ಯಗಳಿಗೆ ಹಕ್ಕುಳ್ಳವನಾಗಿರುವ

– ನಾಯಕನಿಗೆ ಸಂದರ್ಭಾನುಸಾರ ಉಪನಾಯಕನಿಗೆ ಅಥವಾ ಮುಖ್ಯ ಸಚೇತಕನಿಗೆ ಒದಗಿಸತಕ್ಕದ್ದಲ್ಲ.

**4. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು

ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**5. 1959ರ 10ನೇ ಅಧಿನಿಯಮದ 3ನೇ ಪ್ರಕರಣದ ತಿದ್ದುಪಡಿ.–** ಸಂಸತ್ತು (ಅನರ್ಹತೆಯನ್ನು ಪ್ರತಿಬಂಧಿಸುವ) ಅಧಿನಿಯಮ, 1959ರ 3ನೇ ಪ್ರಕರಣದಲ್ಲಿ,–

(i) (ಎಬಿ) ಖಂಡದ ನಂತರ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಸಿ) ಸಂಸತ್ತಿನ ಎರಡೂ ಸದನಗಳಲ್ಲಿ ಮನ್ನಣೆ ಪಡೆದ ಪಕ್ಷದ ಮತ್ತು ಮನ್ನಣೆ ಪಡೆದ ಗುಂಪಿನ ಪ್ರತಿಯೊಬ್ಬ ನಾಯಕನ ಪದ";

(ii) 2ನೇ ವಿವರಣೆಯ ನಂತರ, ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:–

'**ವಿವರಣೆ 3.–** (ಎಸಿ) ಖಂಡದಲ್ಲಿ, "ಮನ್ನಣೆ ಪಡೆದ ಪಕ್ಷ" ಮತ್ತು ಮನ್ನಣೆ ಪಡೆದ ಗುಂಪು" ಎಂಬ ಪದಾವಳಿಗಳು ಸಂಸತ್ತಿನಲ್ಲಿ ಮನ್ನಣೆ ಪಡೆದ ಪಕ್ಷಗಳ ಮತ್ತು ಗುಂಪುಗಳ ನಾಯಕರ ಮತ್ತು ಮುಖ್ಯ ಸಚೇತಕರ (ಸೌಲಭ್ಯಗಳು) ಅಧಿನಿಯಮ, 1998ರಲ್ಲಿ ಅವುಗಳಿಗೆ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.'

* * *